**ಕರ್ನಾಟಕ ಸರ್ಕಾರ**

ಸಂಖ್ಯೆ : ಕಂಇ 158 ಟಿ.ಎನ್.ಆರ್.2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು. ದಿನಾಂಕ: 28.06.2020

# ಆದೇಶ

**ವಿಷಯ: ಬೆಂಗಳೂರಿನಲ್ಲಿ ಅನ್ಲಾಕ್-1 ಅವಧಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ಹರಡುವಿಕೆ ನಿಯಂತ್ರಿಸುವ ಉದ್ದೇಶಕ್ಕಾಗಿ ಕಣ್ಗಾವಲು ಮತ್ತು ಸಾರ್ವಜನಿಕ ಆರೋಗ್ಯ ಪ್ರಯತ್ನಗಳನ್ನು ಹೆಚ್ಚಿಸುವುದು – ಹೊಸ ಕಾರ್ಯತಂಡಗಳ ರಚನೆ**

***

ದಿನಾಂಕ: 15.06.2020, 20.06.2020 ಮತ್ತು 24.06.2020ರ ಸಮ ಸಂಖ್ಯೆಯ ಆದೇಶಗಳನ್ನು ಮುಂದುವರಿಸುತ್ತಾ, ವಿಪತ್ತು ನಿರ್ವಹಣಾ ಕಾಯ್ದೆ, 2005ರ ಸೆಕ್ಷನ್ 24(ಇ), (ಎಫ್) ಮತ್ತು (ಎಲ್) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರದಿಂದ ಸೂಚಿತರಾದ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಮತ್ತು ಚಿಕಿತ್ಸೆಯ ವ್ಯವಸ್ಥೆಗಳನ್ನು ಮಾಡಲು ಈ ಆದೇಶದ ಅನುಬಂಧದಲ್ಲಿ ವಿವರಿಸಿರುವಂತೆ ಎರಡು ಹೊಸ ಕಾರ್ಯತಂಡಗಳನ್ನು ರಚಿಸಿ ಆದೇಶಿಸಲಾಗಿದೆ :

1. ಕಾರ್ಯತಂಡ 19 : ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಜೋಡಿಸಲಾದ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಹಾಗೂ ಕೋವಿಡ್ ಆರೈಕೆ ಕೇಂದ್ರಗಳಿಗೆ ವೈದ್ಯಕೀಯ / ಅರೆ ವೈದ್ಯಕೀಯ ಸಿಬ್ಬಂದಿ ವ್ಯವಸ್ಥೆ ಮಾಡಲು – ವೈದ್ಯಕೀಯ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಟಿ.ಕೆ.ಅನಿಲ್ ಕುಮಾರ್, ಭಾ.ಆ.ಸೇ., ರವರ ನೇತೃತ್ವದಲ್ಲಿ

2. ಕಾರ್ಯತಂಡ 20 : ಎಲ್ಲಾ ಇತರೆ ಖಾಸಗಿ ಆಸ್ಪತ್ರೆಗಳಲ್ಲಿ ವ್ಯವಸ್ಥೆಗಳನ್ನು ಮಾಡಲು – ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾದ ಶ್ರೀ ಎನ್. ಜಯರಾಮ್, ಭಾ.ಆ.ಸೇ. ರವರ ನೇತೃತ್ವದಲ್ಲಿ

ತಮವಿಜಯಭಾಸ್ಕರ್

**(ತ.ಮ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

ಪ್ರತಿ :

ಸಂಬಂಧಪಟ್ಟ ಅಧಿಕಾರಿಗಳಿಗೆ

**ಪು.ತಿ.ನೋ.**

Scanned with CamScanner

**ಸರ್ಕಾರದ ಆದೇಶ ಸಂಖ್ಯೆ : ಕಂಇ 158 ಟಿ.ಎನ್.ಆರ್.2020, ದಿನಾಂಕ 28.06.2020 ರ ಅನುಬಂಧ**

**ವಿಷಯ: ಬೆಂಗಳೂರಿನಲ್ಲಿ ಅನ್ಲಾಕ್-1 ಅವಧಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ಹರಡುವಿಕೆ ನಿಯಂತ್ರಿಸುವ ಉದ್ದೇಶಕ್ಕಾಗಿ ಕಣ್ಗಾವಲು ಮತ್ತು ಸಾರ್ವಜನಿಕ ಆರೋಗ್ಯ ಪ್ರಯತ್ನಗಳನ್ನು ಹೆಚ್ಚಿಸುವುದು – ಹೊಸ ಕಾರ್ಯತಂಡಗಳ ರಚನೆ**

| ಕ್ರಮ ಸಂಖ್ಯೆ | ಕಾರ್ಯ | ಕಾರ್ಯನಾಯಕ (ರು) | ತಂಡದ ಸದಸ್ಯರು | ಕೇಂದ್ರೀಕರಿಸಬೇಕಾದ ಅಂಶಗಳು |
|---|---|---|---|---|
| 19 | ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ವ್ಯವಸ್ಥೆ ಹಾಗೂ ಕೋವಿಡ್ ಆರೈಕೆ ಕೇಂದ್ರಗಳಿಗೆ ವೈದ್ಯಕೀಯ / ಅರೆ ವೈದ್ಯಕೀಯ ಸಿಬ್ಬಂದಿ ವ್ಯವಸ್ಥೆ | ಶ್ರೀ ಟಿ.ಕೆ. ಅನಿಲ್ ಕುಮಾರ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ | 1. ಡಾ. ಸಚ್ಚಿದಾನಂದ, ಉಪ ಕುಲಪತಿ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್.ಜಿ.ಯು.ಹೆಚ್.ಎಸ್.)<br>2. ಡಾ. ಗಿರೀಶ್, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ<br>3. ಶ್ರೀಮತಿ ಮೀನಾಕ್ಷಿ ನೇಗಿ, ಭಾ.ಅ.ಸೇ., ಆಯುಕ್ತರು, ಆಯುಷ್ | 1. ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಜೋಡಿಸಲಾದ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಮತ್ತು ಚಿಕಿತ್ಸೆಯ ವ್ಯವಸ್ಥೆ<br>2. ಕೋವಿಡ್ ಆರೈಕೆ ಕೇಂದ್ರಗಳಿಗೆ ಅಗತ್ಯವಿರುವ ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿ ವ್ಯವಸ್ಥೆ |
| 20 | ಎಲ್ಲಾ ಇತರೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ವ್ಯವಸ್ಥೆ | ಶ್ರೀ ಎನ್. ಜಯರಾಮ್, ಭಾ.ಆ.ಸೇ., ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1. ಶ್ರೀ ರಾಜೇಶ್ ಗೌಡ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ<br>2. ಶ್ರೀ ಶಿವಮೂರ್ತಿ, ಭಾ.ಆ.ಸೇ., ಜಿಲ್ಲಾಧಿಕಾರಿ, ಬೆಂಗಳೂರು ನಗರ<br>3. ಶ್ರೀರವೀಂದ್ರ, ಭಾ.ಆ.ಸೇ., ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ<br>4. ಸಂಬಂಧಿಸಿದ ಪ್ರದೇಶದ ಪೊಲೀಸ್ ಉಪ ಆಯುಕ್ತರು<br>5. ಜಿಲ್ಲಾ ಆರೋಗ್ಯ ಅಧಿಕಾರಿ, ಬೆಂಗಳೂರು ನಗರ<br>6. ಜಿಲ್ಲಾ ಆರೋಗ್ಯ ಅಧಿಕಾರಿ, ಬೆಂಗಳೂರು ಗ್ರಾಮಾಂತರ | ಎಲ್ಲಾ ಇತರೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ವ್ಯವಸ್ಥೆ |

i. ಈ ಕಾರ್ಯತಂಡಗಳು ಆಯುಕ್ತರು, ಬಿಬಿಎಂಪಿ ಇವರಿಗೆ ವರದಿ ಮಾಡುವುದು.

ii. ಇಡೀ ಬೆಂಗಳೂರು ಒಟ್ಟುಗೂಡಿಸುವಿಕೆ ಪ್ರದೇಶದಲ್ಲಿ ನಿಯೋಜಿಸಲಾದ ಕಾರ್ಯದ ಸಮಗ್ರ, ಪರಿಣಾಮಕಾರಿ ಮತ್ತು ಸಮಯೋಚಿತ ಅನುಷ್ಠಾನಕ್ಕೆ ಕಾರ್ಯತಂಡವು ಜವಾಬ್ದಾರವಾಗಿರುತ್ತದೆ.

iii. ಈ ಕಾರ್ಯತಂಡಗಳು, ಇತರ ಕಾರ್ಯತಂಡಗಳು ಮತ್ತು ಪಾಲುದಾರರಿಗೆ ಆಯಾ ವಾರ್ ರೂಮ್ / ಐಟಿ ಆ್ಯಪ್ ಮತ್ತು ಪರಿಕರಗಳ ಮೂಲಕ ಸಮಯೋಚಿತ ರೀತಿಯಲ್ಲಿ ಕ್ರಿಯಾತ್ಮಕ ಮಾಹಿತಿಯನ್ನು ಒದಗಿಸುತ್ತವೆ ಎಂದು ಖಚಿತಪಡಿಸಿಕೊಳ್ಳಬೇಕು.

ತಮವಿಜಯಭಾಸ್ಕರ್

**(ತ.ಮ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು

Scanned with CamScanner